**ದಿನಾಂಕಃ 26-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಗುರುತಿಸಲು ಕೇಳಿಕೊಳ್ಳುತ್ತೇನೆ. ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ವಿ ಎಸ್ ಎ ವಕೀಲರಿಂದಃ</u>**

1. ಅಪಘಾತದ ಸಮಯದಲ್ಲಿ ನನ್ನ ವಯಸ್ಸು 30 ವರ್ಷ ಇತ್ತು ಎಂದರೆ ಸರಿಯಲ್ಲ. ನನ್ನ ವಯಸ್ಸು 26 ವರ್ಷ ಇತ್ತು. ವ್ಯವಸಾಯದಿಂದ ಮಾಸಿಕ 10 ಸಾವಿರ ರೂಪಾಯಿ ಆದಾಯ ಹೊಂದಿದ್ದೆ ಎಂದು ಯಾವುದೇ ಆಧಾರವಿಲ್ಲದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತದ ದಿನ ನಾನು ಚಕ್ಕಡಿಯಲ್ಲಿ ಹೊರಟಿದ್ದೆ. ಲಾರಿಯು ಎದುರಿನಿಂದ ಬರುತ್ತಿತ್ತು. ಲಾರಿಯು ವೇಗವಾಗಿ ಬರುತ್ತಿತ್ತು. ಚಕ್ಕಡಿ ಹೊಡೆಯುತ್ತಿದ್ದ ವ್ಯಕ್ತಿಯು, ಚಕ್ಕಡಿಯನ್ನು ಒಮ್ಮೆಲೆ ರಸ್ತೆಯ ಮೇಲೆ ಅಡ್ಡಾದಿಡ್ಡಿಯಾಗಿ ಓಡಿಸಿದ್ದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ನನ್ನ ತಂದೆ ದಾಖಲಿಸಿದ್ದಾರೆ ಎಂದರೆ ನಿಜ. ಪರಿಹಾರ ಪಡೆಯುವ ಉದ್ದೇಶದಿಂದ ಲಾರಿ ಚಾಲಕನ ವಿರುದ್ದ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

3. ಅಪಘಾತದಲ್ಲಿ ನನ್ನ ಎಡಗಾಲ ಮತ್ತು ಸೊಂಟದ ಮೂಳೆ ಮುರಿತ ಆಗಿದೆ. ಅಪಘಾತದ ತಕ್ಷಣ ನಾನು ಹಾವೇರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು ಸದರಿ ಆಸ್ಪತ್ರೆಯಲ್ಲಿ ಒಂದು ವಾರದ ವರೆಗೆ ಒಳರೋಗಿಯಾಗಿದ್ದೆ. ಆ ನಂತರ ದಾವಣಗೆರೆಯ ಎಸ್ ಎಸ್ ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಎರಡೂ ಆಸ್ಪತ್ರೆಯಲ್ಲಿ ಎಕ್ಸರೆ ತೆಗೆಯಲಾಗಿತ್ತು. ಎಕ್ಸರೆ ಫಿಲ್ಮಗಳನ್ನು ಹಾಜರು ಪಡಿಸಿದ್ದೇನೆ. ಅವುಗಳನ್ನು ಹಾಜರು ಪಡಿಸದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೇವಲ ಸಾದಾ ಸ್ವರೂಪದ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ನಿಪಿ-5 ಮತ್ತು 10 ರಲ್ಲಿರುವ ದಾಖಲೆಗಳನ್ನು ಸುಳ್ಳು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

4. ಲಾರಿ ಚಾಲಕನಿಗೆ ಡಿ ಎಲ್ ಇರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಲಾರಿ ಚಾಲಕನಿಗೆ ಡಿ ಎಲ್ ಇರಲಿಲ್ಲ ಮತ್ತು ಆತನ ತಪ್ಪಿನಿಂದ ಅಪಘಾತವಾಗಿಲ್ಲ ಆದ್ದರಿಂದ 2 ನೇ ಎದುರುದಾರರು ಪರಿಹಾರ ಧನ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.